ಶ್ರೀ ಎಂ. ನಾಗಪ್ಪ:—ಈ ೧೦೦ ಜನ ಸತ್ಯಾಗ್ರಹಿಗಳನ್ನು ಶಿವಮೊಗ್ಗದಿಂದ ಬೆಂಗಳೂರು ಜೈಲಿಗೆ ತರಬೇಕಾದರೆ ಸಾಧಾರಣ ೧೮-೧೪ ಗಂಟೆಗಳವರೆಗೂ ತುಮಕೂರಿನಲ್ಲಿ ಇಟ್ಟು ಅವರಿಗೆ ಯಾವ ತರಹದ ಊಟದ ವ್ಯವಸ್ಥೆಯನ್ನೂ ಮಾಡದೇ ಇದ್ದುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಯಾವ ಕ್ರಮ ತೆಗೆದುಕೊಂಡಿದ್ದೀರಿ? ೧೪ ಗಂಟೆಗಳ ಕಾಲ ಅವರಿಗೆ ಊಟ ಕೊಟ್ಟಿಲ್ಲ.

SRI MANIK RAO PATIL:—It is not a correct fact.

ಶ್ರೀ ಎಂ. ನಾಗಪ್ಪ:—ಚಂದ್ರಶೇಖರ್ ಅಂತ ಅನ್ನುವವರು ರೆಪ್ರಸಂಟೇಷನ್ ಕೊಟ್ಟಿದ್ದಾರೆ. ಅದನು ಸಭೆಯ ಮುಂದೆ ಇಡುತ್ತೀರಾ?

SRI MANIK RAO PATIL:—We have denied this charge.

Re:—strike by the students of Ayurvedic colleges.

† SRI Y. RAMAKRISHNA (MINISTER FOR HEALTH):—The Mysore Stat Indian Medicine Degree Student's Association, Mysore, served a Demand Notice dated 7th September 1970 on the Principals of the Government College of Indian Medicine at Mysore and the Government College of Indian Medicine (Sri Jayachamarajendra Institute of Indian Medicine), Bangalore, and the Assistant Director of Indian Medicine, Directorate of Health and Family Planning Services, Bangalore, stating that they had started a Satyagraha for fulfilment of their demands by the Government. The House Surgeons of Sri Jayachamarajendra Institute of Indian Medicine, Bangalore, also issued a Notice dated 14th September 1970, makingsimilar demands. On 23rd September 1970, the students of B. S. A. M. Degree Course in Bangalore, submitted another representation to Government intimating their decision to go onen indefinite strike with effect from 24th September 1970 making certain new demands.

The Director of Health and Family Planning Services, met the students in the College of Indian Medicine, Bangalore, on 25th September 1970 and discussed with them their demands. on 26th September 1970, Government decided to concede the demands of the students like enhancement of stipend from Rs. 100/to Rs.150/p. m. in the case of graduates, increase of bed strength in Mysore Ayurvedicc Hospital, admission of the extra 33 D. A M. students to the extended B. S. A. M. Course in Mysore and for provision of facilities to the students to study in Sanatorium, Epidemic Hospital, Mental Hospital, and Dental Training etc.

As regards the demand for changing the name of the course from 'B. S A. M.' to B. A. M. & S '.. It may be stated that the B. S. A.M. Course was started as per the recommendation of the Shuddha Ayurvedic Education Board, appointed by the Government of India, Ministry of Health. There is a syllabus for this and the course is being run accordingly in the three Universities in the State *i. e* , Bangalore,

(Sri RAMAKRISHNA)

Mysore and Karanatak. (In Mysore University only recently the name of the course was changed to B. A. M. Course and it is learnt that they are adopting the original nomenclature of BSAM to be on par with the course running in other Universities in the State). It is in the interest of the students themselves that the course should be named as B,SAM so that the Degree qualifications which they acquire may get recognition in other parts of the country enabling them to practice after graduation wherever they want. However, the question of changing the nomenclature of the course and also inclusion of modern medicine in the course demanded by the students is left to the Board of studies of the Universities.

As regards the demand for a separate department, Government is of the view that this is not possible now in view of the need for alround economy in Governmental expenditure. However, Government have decided to revive the post of Joint Director (Special Systems) who will be in sole charge of the subject of Indian Medicine and will be. responsible for the development of the department of Indian Medicine. It is proposed to fill up this post by a well qualified experienced man in Ayurveda by open recruitment, calling for applications on an All India basis.

As regards pay scales for BSAM graduates, the question is under examination. The first batch of the Ayurvedic Graduates under the BSAM extended course is yet to come out after completion of the House Surgency.

The Students at Bangalore College called off the strike from 26th September 1970 after issue of the orders of Government referred to above. However, during the period from 26th September 1970 *i. e.*, from the day of calling off the strike upto 11th October 1970 the students did not attend the classes probably because there were holidays declared by the University. Again on 11th October 1970 the students have put forth certain new demands. These demands relate to the inclusion of modern medicine in their curriculum, changing the name of the course to BAM & S AND Starting of December batch for failed students. As already explained above the question of inclusion of modern medicine and change of nomenclature are for the Board of studies of the concerned Universities. Likewise, the demand for the starting of December batch for failed students is to be considered by the Board of studies of the University.

The major demands of the students have already been considered by Government. The students should now give up the agitational approach and attended their classes.

I take this opportunity to bring to the notice of this august house that Government are committed to develop Ayrurveda and the

Ayrurvedic Institution to the extent the funds are available. Very recently sanction has been accorded to the construction of the building of the College of Indian Medicine in the premises of the Sri. Jayachamarajendra Institute of Indian Medicine at a cost of Rs 13/- Lakhs Sanction has also been accorded for the improvement and extension to the buildings of the Government College of Indian Medicine Mysore at a cost of Rs. 3. 87 Lakhs. Scholarships are sanctioned to students. Grants are being paid to private Ayurvedic Colleges and to the Local Bodies for running Ayurvedic dispensaries according to the grant-in-aid rules. Schemes for research in Jaundice at Bangalore and in the fundamental principles of Ayurveda at Mysore have been undertaken and some of the officers have been deputed for post-graduate coures in Ayurveda out side the state.

Instructions have also been issued to the state Director of Health and Family Plannnig services to collect manuscripts and Literature available in Ayurveda from whatever source they are available, so that arrangements may be made for getteg them publshed for the spread of Ayurveda. Government therefore hope that the Ayurveda Graduates will avail of the existing facilities.

ಶ್ರೀ ಬಿ. ಭಾಸ್ಕರಶೆಟ್ಟಿ:—ಈಗ ೮ ೩೦. p. m. ಆರ್ಯುವೇದ ಸತ್ಯಾಗ್ರಹಿಗಳು ಆರುಜನರು ಉಪವಾಸ ಮಾಡುತ್ತಿದ್ದಾರೆ. ಅವರಲ್ಲಿ ಐದುಜನರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಮೈಸೂರು ರಾಜ್ಯ ಮತ್ತು ಹಿಮಾಚಲ ಪ್ರದೇಶಗಳನ ಬಿಟ್ಟರೆ ಮತ್ತೆ ಎಲ್ಲಾ ಕಡೆಯೂ ಪ್ರತ್ಯೇಕವಾದಂಥ ಡೈರಕ್ಟರೇಟ್ ಇದೆ. ಅಲೊಪತಿಕ್‌ನವರಿಗೆ ಆರ್ಯುವೇದದವರ ಮೇಲೆ ಅಷ್ಟು ಇಂಟರೆಸ್ಟ್ ಇರುವುದಿಲ್ಲ. ಆರ್ಯುವೇದ ನಮ್ಮ ನಮ್ಮ ರಾಜ್ಯದಲ್ಲಿ ಬಹಳ ಇಂಪ್ರೂವ್ ಆಗಿರುತ್ತದೆ. ಅದಕ್ಕೋಸ್ಕರ ಸಪರೇಟ್ ಡೈರಕ್ಟರೇಟ್ ಮಾಡಬೇಕು ಇಲ್ಲದಿದ್ದರೆ ಅವರು ಉಪವಾಸ ಸತ್ಯಾಗ್ರಹವನ್ನು ಬಿಡುವುದಿಲ್ಲ.

ಶ್ರೀ ವೈ. ರಾಮಕೃಷ್ಣ:— ಆಲೊಪತಿಕ್ ಸ್ಟೂಡೆಂಟ್ಸ್ ಐದುವರ್ಷಗಳ ಕಾಲ ಡಿಗ್ರಿ ಕೋರ್ಸ ಮಾಡಿರುತ್ತಾರೆ. ಅವರಿಗೆ ಕೊಡುವ ಸಂಬಳ ನಮಗೂ ಕೊಡಿ ಎಂದು ಕೇಳಿದರೆ ಅದು ನ್ಯಾಯವಾದ ಬೇಡಿಕೆಯೇ ?

ಶ್ರೀ ಬಿ. ಭಾಸ್ಕರಶೆಟ್ಟಿ:—ಈ ಆರ್ಯುವೇದದ ಬಗ್ಗೆ ತಾರೀಕು ೨೫ನೇ ನವಂಬರ್ ೧೯೬೬ ರಲ್ಲಿ ಹಿಂದಿನ ಆರೋಗ್ಯ ಮಂತ್ರಿಗಳಾಗಿದ್ದ ಡಾ. ನಾಗಪ್ಪ ಆಳ್ವ ಇದೇ ಸಭೆಯಲ್ಲಿ ಒಂದು ಸಪರೇಟ್ ಡೈರಕ್ಟರೇಟ್ ಮಾಡುವುದಕ್ಕೆ ಭರವಸೆ ಕೊಟ್ಟಿದ್ದಾರೆ. ಆದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಏಕೆಂದರೆ ಈಗ ವಿದ್ಯಾರ್ಥಿಗಳ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವರು ಉಪವಾಸಮಾಡುತ್ತಿದ್ದಾರೆ. ಅವರಿಗೆ ನೀವೆ ಆಶ್ವಾಸನೆ ಕೊಟ್ಟು ಅವರ ಬೇಡಿಕೆಗಳನ್ನು ಈಡೇರಿಸಿಕೊಟ್ಟು ಅವರನ್ನು ರಕ್ಷಣೆಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಬೇಡುತ್ತೇನೆ..

ಶ್ರೀ ವೈ ರಾಮಕೃಷ್ಣ:— ಸಾಮಾನ್ಯವಾಗಿ ಅವರು ಯಾವ್ಯಾವ ಡಿಮ್ಯಾಂಡುಗಳನ್ನು ನಮ್ಮ ಮುಂದೆ ಇಟ್ಟಿದ್ದಾರೋ ಅವುಗಳಲ್ಲಿ ಯಾವುದನ್ನು ನಮ್ಮ ರಾಜ್ಯಸರ್ಕಾರ ಒಪ್ಪಿಕೊಳ್ಳಬಹುದೋ ಅದನ್ನು ನಾನು ಒಪ್ಪುತ್ತೇನೆ ಈಗ ಅವರ ಬೇಡಿಕೆಗಳಲ್ಲಿ ಬಹಳ ಮುಖ್ಯವಾದ ಬೇಡಿಕೆ ನಮ್ಮ ಮುಂದಿರುವುದು ಸೆಪರೇಟ್ ಡೈರಕ್ಟರೇಟ್ ಮಾಡುವಂಥಾದ್ದು. ಜಾಯಿಂಟ್ ಡೈರೆಕ್ಟರ್ ಸಾ ನಕ್ಕೆ ಯಾರು ಆಯುರ್ವೇದದಲ್ಲಿ ಅರ್ಹತೆ ಪಡೆದಿರುತ್ತಾರೋ, ಯಾರು ನುರಿತಿರುತ್ತಾರೋ, ಅಂತಹವರು ಮೈಸೂರು ಸಂಸ್ಥಾನದಲ್ಲಿ ಸಿಗಲಿ ಅಥವಾ ಹೊರಗಡೆ ಸಿಗಲಿ ಅವರನ್ನು ನೇಮಕಮಾಡುತ್ತೇವೆ. ಹೊರಗಡೆಯೂ ಇದಕ್ಕೆ ಅಡ್ವರ್ಟೈಸ್‌ಮೆಂಟ್ ಕೊಡುತ್ತೇವೆ. ಅವರನ್ನು ನೇಮಕಮಾಡಿದಮೇಲೆ ಅವರು ಬಂದು ಏನು ಹೇಳುತ್ತಾರೋ ಅದಕ್ಕೆ ನಾನು ಬದ್ಧನಾಗಿರುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ:— ಅವರ ಸಂಬಳಸಾರಿಗೆ ವಿಚಾರವಾಗಿ ಹೇಳುವುದಾದರೆ, ಅವರು ಇನ್ನೂ ಮೊದಲನೆಯ ದರ್ಜೆಯ ಸಂಬಳಕ್ಕೆ ಬಂದಿಲ್ಲ ಅವರು ಬಿ. ಎ. ಎಂ. ಎಸ್, ಗೆ ಬರುವುದಕ್ಕೆ ಮುಂದೆ ಆ ವಿಚಾರವನ್ನು ಕನ್‌ಸಿಡರೇಷನ್ನಿನಲ್ಲಿಟ್ಟುಕೊಂಡಿದ್ದೇವೆಂದು ಹೇಳಿದಿರಿ, ಅವರು ಅಲ್ಲಿ ಬಂದ ಮೇಲೆ ಅದರ ಬಗ್ಗೆ ಪರಿಶೀಲನೆಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ:— ಅಲೋಪತಿಕ್ ಹೌಸ್ ಸರ್ಜನ್‌ಗೆ ೧೫೦ ರೂಪಾಯಿನ್ನು ಕೊಡುತ್ತಿದ್ದೇವೆ. ಅದೇರೀತಿ ಆಯುರ್ವೇದದ ಡಾಕ್ಟರಿಗೂ ಕೊಟ್ಟಿದ್ದೇವೆ.

ಶ್ರೀ ಬಿ. ಭಾಸ್ಕರ್‌ಶೆಟ್ಟಿ:— ಈಗ ಮೊದಲನೇಯ ಬ್ಯಾಚ್‌ನವರು ಬಂದಿದ್ದಾರೆ. ೧೯೬೬ ರಲ್ಲಿ ಅವರಿಗೆ ಆ ರೀತಿ ಅಶ್ವಾಸನೆಕೊಟ್ಟಿದೀರಿ ಈಗ ನಾಲ್ಕೈದು ಮಕ್ಕಳು ಪ್ರಾಣಬಿಡುವಪರಿಸ್ಥಿತಿಯಲ್ಲಿ ಇದಾರೆ ಆ ಮಕ್ಕಳಿಗೆ ನ್ಯಾಯ ಮಾಡಿಕೊಡೋಕೆಲ್ಲವೇ ?

ಶ್ರೀ ವೈ. ರಾಮಕೃಷ್ಣ:— ಅಲೋಪತಿಕ್ ಹೌಸ್ ಸರ್ಜನ್ ಗಳಿಗೆ ಏನು ಸಂಬಳವನ್ನು ಕೊಟ್ಟಿದ್ದಿವೋ ಅದನ್ನೇ ಆಯುರ್ವೇದ ಡಾಕ್ಟರುಗಳಿಗೂ ಕೊಟ್ಟಿದ್ದೇವೆ. ಆ ಡಾಕ್ಟರುಗಳು ಇಲ್ಲದೇ ಇರುವಾಗ ಅವರಿಗೆ ಸಂಬಳ ಹೇಗೆ ನಿಗದಿಮಾಡಿಕೊಡಬೇಕು ? ಅದನ್ನು ಸಹಾನುಭೂತಿಯಿಂದ ಪರಿಶೀಲಿಸಿಕೊಡುತ್ತೆವೆ.

ಶ್ರೀ ಎಸ್. ಹಮ್ಮಿದ್ ಷಾ:— ಅದನ್ನು ಮಾಡುತ್ತೇವೆಂದು ನೀವು ಅಶ್ವಾಸನೆ ಕೊಡದಿದ್ದರೆ ಅದು ಸರಿಯಿಲ್ಲ. ಅವರಿಗೆ ಇರುವ ಸಂಶಯ ಜಾಯಿಂಟ್ ಡೈರೆಕ್ಟರನ್ನು ಅಲ್ಲಿಗೆ ನೇಮಕ ಮಾಡುವುದಿಲ್ಲವೆಂಬುದು ಅದನ್ನು ಪುನಃ ಪರಿಶೀಲನೆಮಾಡಬೇಕು. ನೀವೆ ಮಂತ್ರಿಗಳು ಅಲ್ಲಿಗೆ ಹೋಗಿ ಅಶ್ವಾಸನೆ ಕೊಟ್ಟು ಮುಂದೆ ಅದರ ಬಗ್ಗೆ ನ್ಯಾಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಆಗ ಅವರು ಅದಕ್ಕೆ ಒಪ್ಪ ಬಹುದು. ಈಗ ಬಂದಿರುವ ವಿಪರೀತ ಪರಿಸ್ಥಿತಿಯನ್ನು ನಿವಾರಣೆಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ — ಮಾನ್ಯ ಶ್ರೀ ಹಮ್ಮಿದ್ ಷಾ ಅವರು ಹೇಳಿದಂತೆ ಮಾನ್ಯ ಮಂತ್ರಿಗಳು ಹೋಗಿ ಹೇಳಿದರೆ ಒಳ್ಳೆಯದು, ಏಕೆಂದರೆ ಐದಾರು ಜನರು ಉಪವಾಸ ವ್ರತವನ್ನು ಮಾಡುತ್ತಿದ್ದಾರೆ. ನೀರು ಸಹ ಕುಡಿಯುತ್ತಾ ಇಲ್ಲ. ಇಬ್ಬರ ಪರಿಸ್ಥಿತಿಯಂತೂ ತುಂಬಾ ಚಿಂತಾಜನಕವಾಗಿದೆ.

ಶ್ರೀ ವೈ. ರಾಮಕೃಷ್ಣ :— ಅವರಿಗೆ ಈ ವಿಚಾರವಾಗಿ ಡೈರೆಕ್ಟರ್ ಅವರು ಹೋಗಿ ಹೇಳಿದ್ದಾರೆ. ಸೆಕ್ರೆಟರಿಯವರು ಹೋಗಿ ಹೇಳಿದ್ದಾರೆ. ಮಾನ್ಯ ಶ್ರೀ ಭಾಸ್ಕರಶೆಟ್ಟಿಯವರು ಮತ್ತು ಮಾನ್ಯ ಶ್ರೀ ಚುರ್ಚಿಹಾಳ್‌ಮಠ್ ಅವರು ಹೋಗಿ ಹೇಳಿದ್ದಾರೆ. ಇನ್ನು ನಾನು ಏನು ಮಾಡಬೇಕೋ ಗೊತ್ತಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ :— ಆ ರೀತಿಯಾಗಿ ತಾವೇ ಹೋಗಿ ಹೇಳಬೇಕು.

ಶ್ರೀ ವೈ. ರಾಮಕೃಷ್ಣ :— ಅಲೋಪತಿ ಡಾಕ್ಟರುಗಳು ಸಿಗುವ ಹಾಗೆ ಆಯುರ್ವೇದ ಡಾಕ್ಟರುಗಳು ಸಿಗುವುದಿಲ್ಲ. ಗುಜರಾತ್ ಮುಂತಾದ ದೊಡ್ಡ ದೊಡ್ಡ ದೇಶಗಳಲ್ಲಿ ಆಯುರ್ವೇದ ಕಾಲೇಜುಗಳಿವೆ. ಅಲ್ಲಿ ಡೈರಕ್ಟರಗಳು ಸಿಗದೆ ಐ.ಎ.ಎಸ್. ಆಫೀಸರುಗಳನ್ನು ನೇಮಕಮಾಡಿದ್ದಾರೆ. ಹೈದರಾಬಾದಿನಲ್ಲಿಯೂ ಆ ರೀತಿ ಮಾಡಿಕೊಂಡಿದ್ದಾರೆ. ಇವತ್ತು ಆಲ್ ಇಂಡಿಯಾ ಆಯುರ್ವೇದ ಡಾಕ್ಟರ್ ಪದವಿ ಹೊಂದಿರುವವರು ಸಿಗುವುದಿಲ್ಲ. ಅಂತಹವರು ಸಿಕ್ಕಿದರೆ ಅವರನ್ನೇ ನೇಮಿಸುತ್ತೇವೆ. ಈಗಾಗಲೇ ಜಾಯಿಂಟ್ ಡೈರೆಕ್ಟರ್ ಹುದ್ದೆಗೆ ಕಾಲ್ ಫಾರ್ ಮಾಡಿದ್ದೇವೆ. ಅವರು ಬಂದು ಕೂಡುವ ಸಲಹೆಗೆ ನಾನು ಬದ್ಧನಾಗಿರುತ್ತೇನೆ.

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ್ :— ಮಾನ್ಯ ಮಂತ್ರಿಗಳು ಸುಮಾರು ೩ ವರ್ಷಗಳವರೆಗೂ ಅಂತಹವರು ಯಾರು ಸಿಗಲಿಲ್ಲವೆಂದು ಹೇಳಿದ್ದಾರೆ ಆದರಿಂದ ಅವರಿಗೆ ತೊಂದರೆಯಾಗಿದೆ. ಜಾಯಿಂಟ್ ಡೈರಕ್ಟರ್ ಎಂದು ಇರುವುದನ್ನು ಡೈರಕ್ಟರ್ ಆಗಿ ಬದಲಾಯಿಸಿದರೆ, ಆಗ ವಿದ್ಯಾರ್ಥಿಗಳು ಅವಕ್ಕೆ ಒಪ್ಪಬಹುದು. ಜಾಯಿಂಟ್ ಡೈರಕ್ಟರ್ ಎಂದು ಇರುವುದನ್ನು ಡೈರಕ್ಟರ್ ಎಂದು ಮಾಡಬಹುದಲ್ಲವೇ ?

ಶ್ರೀ ವೈ. ರಾಮಕೃಷ್ಣ :— ಜಾಯಿಂಟ್ ಡೈರಕ್ಟರ್ ಹುದ್ದೆಗೆ ಬೇಕಾದಂಥ ಅರ್ಹತೆ ಇರುವವರೇ ಇಲ್ಲವೆಂದು ಹೇಳುವಾಗ ಡೈರಕ್ಟರ್ ಹುದ್ದೆಗೆ ಬೇಕಾದಂಥ ಅರ್ಹತೆ ಇರುವವರನ್ನು ಎಲ್ಲಿಂದ ತರುವುದು ? ಅವರು ಪೋಸ್ಟ್ ಗ್ರಾಜುಯೇಟ್ ಆಗಿರಬೇಕು, ಆಯುರ್ವೇದದಲ್ಲಿ ೧೫ ವರ್ಷಗಳ ಅನುಭವ ಹೊಂದಿರಬೇಕು. ಅಂತಹವರು ಸಿಕ್ಕಿದರೆ ಆಗ ಅವರನ್ನು ನೇಮಕಮಾಡಬಹುದು.

ಶ್ರೀ ಬಿ. ಭಾಸ್ಕರಶೆಟ್ಟಿ :— ತಾವು ಮೊದಲು ಅಡ್ವರ್ಟೈಸ್ ಮಾಡಿ ಸಿಗದಿದ್ದರೆ ಆಗ ಸಪರೇಟ್ ಡೈರಕ್ಟರೇಟ್ ಮಾಡುತ್ತೇವೆಂದು ಹೇಳಿ. ಆಗ ಸಿಗುತ್ತಾರೆ.

ಶ್ರೀ ವೈ. ರಾಮಕೃಷ್ಣ :— ಡೈರಕ್ಟರನ್ನು ನೇಮಕ ಮಾಡಬೇಕಾದರೆ, ಅವರಿಗೆ ಅಲ್ಲಿ ಪೂರ್ತಿಯಾಗಿ ಕೆಲಸ ಇರಬೇಕು. ನಮ್ಮ ರಾಜ್ಯದಲ್ಲಿ ಆಸ್ಪತ್ರೆಗಳು ಎಷ್ಟು ಇವೆ, ಅಷ್ಟು ಬೇರೆ ರಾಜ್ಯಗಳಲ್ಲಿ ಇಲ್ಲ. ಇವತ್ತು ಮುನಿಸಿಪಾಲಿಟಿಯವರು, ಮತ್ತು ತಾಲ್ಲೂಕು ಬೋರ್ಡಿನವರು ಯಾರೂ ಇಂತಹ ಆಸ್ಪತ್ರೆಗಳು ಬೇಕೆಂದು ಕೇಳುತ್ತಾ ಇಲ್ಲ. ಹೀಗಿರುವುದರಿಂದ, ಡೈರೆಕ್ಟರನ್ನು ನೇಮಕ ಮಾಡಿದರೆ, ಅವರಿಗೆ ಏನು ಕೆಲಸವನ್ನು ಕೊಡಲಿ ?

ಶ್ರೀ ಸಿ. ಎಂ. ಚುರ್ಚಿಹಾಲ್‌ಮಠ್ :— ರೈಟಿಗರಲ್ಲಿ ಇದರ ಬಗ್ಗೆ ಸತ್ಯಾಗ್ರಹ ಮಾಡಿದಾಗ ಒಂದು ತಿಮ್ಮೇಗೌಡ ಸಮಿತಿ ಮಾಡಿಸಿದ್ದಾರೆ ಆಗ ಅವರ ವರದಿ ಪ್ರಕಾರ ಮಾಡುತ್ತೇವೆಂದು ಸರ್ಕಾರದಪರು ಆಶ್ವಾಸನೆ ಕೊಟ್ಟಿದ್ದರು. ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ. ೫೦೦ ಡಿಸ್ಪೆನ್ಸರಿಗೆ ಡೈರೆಕ್ಟೊರೇಟ್ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಅದನ್ನು ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆ.

ಶ್ರೀ ವೈ. ರಾಮಕೃಷ್ಣ :— ಜನಗಳು ಕೇಳಬೇಕು. ಆಗ ಮಾಡಬಹುದು.

ಶ್ರೀ ಬಿ. ಭಾಸ್ಕರ ಶೆಟ್ಟಿ :— ಇನ್ನೊಂದು ವಿಷಯ ಹೇಳುತ್ತೇನೆ. ಮಾನ್ಯ ಮಂತ್ರಿಯವರು ಹೇಳಿದಂತದ್ದು ಸತ್ಯಕ್ಕೆ ದೂರವಾದುದು. ಈಗ ೮೦೦ ಆದರೂ ಇರಬಹುದು. ರೈಟಿಗರಲ್ಲಿ ಮಾಡಿದ ಕಮಿಟಿ ಶಿಫಾರಸನ್ನು ಇಂಪ್ಲಿಮೆಂಟ್ ಕೂಡ ಮಾಡಿಲ್ಲ. ಈಗ ಆಯುರ್ವೇದ ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಪ್ರತ್ಯೇಕ ಡೈರೆಕ್ಟೊರೇಟ್ ಮಾಡಬೇಕು. ಅದನ್ನು ಒಪ್ಪುತ್ತೀರಾ ಮತ್ತು ಅವರ ಸ್ಕೇಲನ್ನು ಕೂಡ ರಿವೈಸ್ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ :— ಅವರ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಡೈರೆಕ್ಟರನ್ನಾಗಿ ಹುಡುಕಲು ವ್ಯಕ್ತಿ ಸಿಗಲಿಲ್ಲ. ಹಾಗೆ ಸಿಗದಿದ್ದಾಗ, ಅಲೋಪತಿ ಇದ್ದವರನ್ನು ಜಾಯಿಂಟ್ ಡೈರೆಕ್ಟರಾಗಿ ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ :— ಆಲ್ ಇಂಡಿಯಾ ಲೆವೆಲಿನಲ್ಲಿ ಅಡ್ವರ್ಟೈಸ್ ಮಾಡಿ. ಅದಕ್ಕೆ ಬೇಕಾಡ ವ್ಯಕ್ತಿ ಸಿಕ್ಕಿದರೆ ಪ್ರತ್ಯೇಕ ಡೈರೆಕ್ಟೊರೇಟ್ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ :— ಅಂತಹ ವ್ಯಕ್ತಿಗಳು ಬಂದು ಅವರ ಅಭಿಪ್ರಾಯ ವ್ಯಕ್ತಪಡಿಸಿದಲ್ಲಿ ಸರ್ಕಾರ ಅದನ್ನು ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

SRI B. B. SAYANAK :— Has it come to the notice of the Government that in Maharashtra B.A.M.S. Course has been abolished ?

SRI Y. RAMAKRISHNA :— I am not aware of it sir.

MR SPEAKER :— The last item in the agenda will be included in tomorrow's Agenda. Now, the House will stand adjourn and meet at 1-00 P M. tomorrow.

The House adjourned at Forty Five Minutes past Eight of the clock to meet at One of the Clock on Saturday the 17th October 1970.

WD 15540—GPB—550—4-1-1971